**ಅ. ದಾ. ಸಂ. ಃ 269 / 2010**
**ಪಿ.ಡಬ್ಲ್ಯೂ ಃ 01**

**ದಿನಾಂಕ ಃ 15-02-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- 1 ನೇ ಪ್ರತಿವಾದಿಯ ಪರ ಶ್ರೀ. ಎಂ.ಎನ್. ವಕೀಲರಿಂದ ಃ-**

ದಾವ ಸ್ವತ್ತು ನಮಗೆ ಕೊಡಬೇಕೆಂದು ಕೋರಿ ದಾವೆ ಹೂಡಿರುತ್ತೇನೆ, ಅದರೊಂದಿಗೆ 25 ಸಾವಿರ ರೂಪಾಯಿ ನಷ್ಟ ಪರಿಹಾರ ಕೊಡಬೇಕೆಂದು ಕೋರಿರುತ್ತೇನೆ. ದಾವ ಸ್ವತ್ತು ಮೂಲತಃ ನಮ್ಮ ಪಿತ್ರಾರ್ಜಿತ ಸ್ವತ್ತು ಆಗಿದೆ. ನಮ್ಮ ಕುಟುಂಬದಲ್ಲಿ ವಿಭಾಗ ಆಗಿದೆ ಎಂದರೆ ಸರಿ. ದಾವ ಸ್ವತ್ತು ನನ್ನ ತಮ್ಮ ಭಾಗಕ್ಕೆ ಹೋಗಿತ್ತು, ಆದರೆ ಕೆಲವು ಷರತ್ತುಗಳಿಗೆ ಒಳಪಟ್ಟಿತ್ತು ಎನ್ನುತ್ತಾರೆ. ಸದರಿ ಷರತ್ತುಗಳಿಗೆ ಒಳಪಟ್ಟಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ವ್ಯವಸಾಯ ಹೊರತು ಪಡಿಸಿ ಬೇರೆ ಯಾವುದೇ ಉದ್ಯೋಗ ಮಾಡುವುದಿಲ್ಲ ಎಂದರೆ ಸರಿ.

2. ವ್ಯವಸಾಯದಿಂದ ಉಂಟಾದ ನಷ್ಟಕ್ಕೆ ಬ್ಯಾಂಕಿನಲ್ಲಿ ಲೋನ್ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ಭೂ ಅಭಿವೃದ್ಧಿಗಾಗಿ ಸಾಲ ಪಡೆದುಕೊಂಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಯು ನನ್ನ ತಮ್ಮನೊಂದಿಗೆ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಎಲ್ಲರೊಂದಿಗೂ ವಾಸಿಸುತ್ತಿದ್ದರು ಎನ್ನುತ್ತಾರೆ. ನನ್ನ ತಂದೆಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿ. ಸದರಿಯವರಿಗೆ ನನ್ನ ತಮ್ಮ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಚಿಕಿತ್ಸೆಗಾಗಿ ನನ್ನ ತಮ್ಮ ಸಾಕಷ್ಟು ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**